International Journal of Kannada Research 2016; 2(3): 171-174

International Journal of Kannada Research
www.kannadajournal.com

ISSN: 2454–5813
IJSR 2016; 2(3): 171-174
© 2016 IJKS
www.kannadajournal.com
Received: 15-05-2016
Accepted: 17-06-2016

**ಪ್ರೊ. ದೊರೇಶ**
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು ಸಂಶೋಧನಾ ವಿದ್ಯಾರ್ಥಿ, ತುಮಕೂರು ವಿ.ವಿ. ತುಮಕೂರು.

**ಮಾರ್ಗದರ್ಶಕರು**
ಡಾ.ಪಿ.ಎಂ.ಗಂಗಾಧರಯ್ಯ ತುಮಕೂರು ವಿ.ವಿ.ತುಮಕೂರು.

**Correspondence**
**ಪ್ರೊ. ದೊರೇಶ**
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು ಸಂಶೋಧನಾ ವಿದ್ಯಾರ್ಥಿ, ತುಮಕೂರು ವಿ.ವಿ. ತುಮಕೂರು.

# ನಾಗತಿಹಳ್ಳಿ ಚಂದ್ರಶೇಖರ ಅವರ ಪ್ರವಾಸ ಕಥನಗಳು: ವಿಶ್ಲೇಷಣೆ

**ಪ್ರೊ. ದೊರೇಶ ಮಾರ್ಗದರ್ಶಕರು**

ಪ್ರಾಚೀನ ಕಾಲದಲ್ಲಿ ಅದೆಷ್ಟೋ ಜನರು ಗೃಹಸ್ಥಾಶ್ರಮ ಕಳೆದು ವಾನಪ್ರಸ್ಥಾಶ್ರಮಕ್ಕೆ ತೆರಳಿ ಆಶ್ರಮ ನಿರ್ಮಿಸಿಕೊಂಡ ಋಷಿ, ಮುನಿ, ಸಂತ ಸಾಧುಗಳನ್ನು ಇತಿಹಾಸದಿಂದ ತಿಳಿದಿದ್ದೇವೆ. ಇದಕ್ಕೆ ಕಾರಣ ಏಕಾಂತದ ಹಂಬಲ, ತನ್ನ ಆತಂಕದ ಮನಸ್ಸಿಗೆ ನೆಮ್ಮದಿ ಆನಂದವನ್ನು ತಂದು ಕೊಳ್ಳುವ ಉಪಕ್ರಮ. ಇದರಿಂದ ಸಿಗಬಹುದಾದ ನೆಮ್ಮದಿ ತೃಪ್ತಿಯನ್ನು ಸೀಮಿತ ವಲಯದಲ್ಲಿ ಅಭಿವ್ಯಕ್ತಿಸುವ ಅನುಭವಗಳನ್ನು ತುಂಬಿಕೊಳ್ಳುವ ಹಿನ್ನೆಲೆಯಲ್ಲಿ ಕಾವ್ಯ, ಶಾಸ್ತ್ರ, ಪುರಾಣಗಳು ಸೃಷ್ಟಿಯಾದವು, ಹಾಗೆಯೇ ಇಂದಿಗೂ ಲೌಕಿಕ ಬದುಕಿನಲ್ಲಿ ಬೇಸರವಾದರೆ ನಾಲ್ಕು ದಿನ ಬಂಧುಗಳ ಮನೆಗೂ, ನೆಂಟರ ಮನೆಗೂ, ಸ್ನೇಹಿತರ ಮನೆಗೂ ಹೋಗಿ ಬರುತ್ತೇವೆಂದು ಹೇಳವುದನ್ನು ಕೇಳುತ್ತೇವೆ. ಇದರಿಂದಾಗಿ ಮಾನವನ ಏಕತಾನತೆಯ ಬದುಕಿಗೆ ಈ ರೀತಿಯ ಸ್ಥಳ ಬದಲಾವಣೆ, ಪರಿಸರ ಬದಲಾವಣೆ ಒಂದು ರೀತಿಯ ನವೀನ ಚೈತನ್ಯವನ್ನು ತಂದು ಕೊಡಬಲ್ಲದು. ಪುಸ್ತಕದಿಂದ ದೊರೆಯುವ ಜ್ಞಾನ, ಸ್ವತಃ ದೇಶಗಳನ್ನು ಸುತ್ತಿ ಅರಿಯುವ ಜ್ಞಾನ ಎರಡು ಸಮನಾದವುಗಳು. ಹೀಗೆ ಒಂದು ಕಾಲಕ್ಕೆ ಮನೋರಂಜಕವಾಗಿ ಬೆಳೆದುಕೊಂಡು ಬಂದ ಪ್ರವಾಸವು ನಂತರ ಜ್ಞಾನ ಅಭೀಪ್ಸೆಯ ಹಿನ್ನಲೆಯಲ್ಲಿ ಬೆಳವಣಿಗೆ ಹೊಂದಿ ಇತ್ತೀಚೆಗೆ ವ್ಯಾಪಾರ, ವ್ಯವಹಾರ, ಸಾಂಸ್ಕೃತಿಕ ವಿನಿಮಯಗಳ ಆಶಯಗಳನ್ನು ಹೊತ್ತು ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಸೃಷ್ಟಿಯಾದ ಸಾಹಿತ್ಯ ಪ್ರವಾಸ ಸಾಹಿತ್ಯ. ಯಾವುದೇ ಒಬ್ಬ ವ್ಯಕ್ತಿ ತನ್ನ ಪರಿಸರವನ್ನು ತೊರೆದು ಮತ್ತೊಂದು ಹೊಸ ಪರಿಸರಕ್ಕೆ ಹೋದಾಗ ಅಲ್ಲಾಗುವ ಅನುಭವಗಳನ್ನೂ, ವಿಸ್ಮಯಗಳನ್ನು, ಅನುಭವಿಸಿ ಅರಗಿಸಿಕೊಂಡ ಆ ಸ್ಥಳಗಳ ವೈವಿಧ್ಯತೆಗಳ ಆನಂದಗಳನ್ನು ವರ್ಣಿಸುವ, ಅಭಿವ್ಯಕ್ತಿಸುವ, ವಿವರಿಸುವ ವಿಧಾನವೇ ' ಪ್ರವಾಸ ಕಥನ' .

ಕನ್ನಡದಲ್ಲಿ ಹಲವು ಪ್ರವಾಸ ಕಥನಕಾರರಲ್ಲಿ ಬಹುಮುಖ್ಯವಾಗಿ ಗುರುತಿಸಿ ಹೇಳಬಹುದಾದ ಹೆಸರು ನಾಗತಿಹಳ್ಳಿ ಚಂದ್ರಶೇಖರ. ನಿಜ ಜೀವನದಲ್ಲಿ ಅಲೆಮಾರಿ ಎಂದೇ ಗುರುತಿಸಬಹುದಾದ ಬರಹಗಾರ. ತಮ್ಮ ಸ್ವದೇಶೀ ಮತ್ತು ವಿದೇಶೀ ತಿರುಗಾಟದಲ್ಲಿ ಎರಡೂ ಮಾದರಿಯ ಕಥನಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಅಯನ,ಅಮೇರಿಕಾ,ಅಮೇರಿಕಾ.ದಕ್ಷಿಣದ್ರುವದಿಂ, ನನ್ನ ಗ್ರಹಿಕೆಯ ಈಜಿಪ್ಟ್, ನನ್ನ ಗ್ರಹಿಕೆಯ ಸಿಕ್ಕಿಂ,ನನ್ನ ಗ್ರಹಿಕೆಯ ನೇಪಾಳ ಇವು ಪ್ರಮುಖವಾಗಿ ಕೃತಿ ರೂಪ ತಾಳಿದ ಪ್ರವಾಸ ಕಥನಗಳು. ಇನ್ನು ಅದೆಷ್ಟೋ ದೇಶಗಳ ಸುತ್ತಾಟವನ್ನು ಸಂಕ್ಷಿಪ್ತವಾಗಿ ಲೇಖನ ರೂಪದಲ್ಲಿ ಓದುಗನ ಮುಂದಿಟ್ಟಿದ್ದಾರೆ.ಇವರ ಪ್ರವಾಸ ಕಥನಗಳು ಮನುಷ್ಯನ ಚಿಂತನೆಯ ಹುಡುಕಾಟದ ಬೇರೆ – ಬೇರೆ ನಿಲುವುಗಳಾಗಿವೆ. ಅಂದರೆ ತಾವು ಕೈಗೊಂಡ ಪ್ರವಾಸ ಮತ್ತು ಪ್ರವಾಸದಲ್ಲಿ ಕಂಡುಂಡ ವಿಭಿನ್ನ ನಿಸರ್ಗ, ವಿಭಿನ್ನ ಸಂಸ್ಕೃತಿ, ವಿಭಿನ್ನ ಜನ, ವಿಭಿನ್ನವಾದ ಪರಂಪರೆ

ಮೊದಲಾದವುಗಳನ್ನು ವರದಿಯಂತೆ ಸಂಗ್ರಹಿಸದೆ ಒಬ್ಬ ಸೃಜನಶೀಲ ವ್ಯಕ್ತಿಯಾಗಿ ತನ್ನಲ್ಲಿ ಉಂಟಾದ ಭಾವನೆಗಳನ್ನು ವಿಚಾರದ ಮಂಥನದಿಂದ ಚರಿತ್ರೆಯ ಸಾಕಾರದಿಂದ ಕಾವ್ಯಾತ್ಮಕವಾಗಿ ಕಟ್ಟಿಕೊಡುವುದರ ಮೂಲಕ ಸಹೃದಯನ ಮನಸ್ಸನ್ನು ಸೂರೆಗೈಯುತ್ತಾರೆ.

ಪ್ರವಾಸವನ್ನೇ ಕುರಿತು ಬಂದಿರುವ ಕೃತಿಗಳು ಭಿನ್ನ ನೆಲೆಯವು. ಪ್ರಪಂಚದ ನಾನಾ ಭಾಗಗಳಿಗೆ ಅಂದರೆ ನಾನಾ ದೇಶಗಳಿಗೆ ಸಂಬಂಧಿಸಿದವುಗಳು. ಅಲೆಮಾರಿತನವನ್ನೇ ಆಸಕ್ತಿಯಿಂದ ಮೈಗೂಡಿಸಿಕೊಂಡಂತಿರುವ ನಾ.ಚಂ ಅವರು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿಯೇ ಪ್ರವಾಸ ಹೋಗುವುದು ಹೆಚ್ಚು.ಈ ನಿಟ್ಟಿನಲ್ಲಿ ನಾಗತಿಹಳ್ಳಿ ಚಂದ್ರಶೇಖರ ಅವರ ಪ್ರವಾಸ ಕಥನಗಳು ಜೀವನದ ಅನುಭವಗಳು' ಎಂಬುದು ಬಹಳ ಗಮನೀಯ. ಪ್ರವಾಸಕ್ಕೆಂದು ಹೋದವರು ತುರಾತುರಿಯಲ್ಲಿ ಪ್ರವಾಸ ಸ್ಥಳಗಳನ್ನು ವೀಕ್ಷಿಸಿ, ನೋಡಿದ ಕ್ಷೇತ್ರಗಳನ್ನು ಅಭಿವ್ಯಕ್ತಿಸುವಾಗ ಅಷ್ಟೇ ತುರಾತುರಿಯಲ್ಲಿ ಮೇಲ್ಮಟ್ಟದಲ್ಲಿ ಅಭಿವ್ಯಕ್ತಿಸುವುದುಂಟು. ಆದರೆ ನಾಗತಿಹಳ್ಳಿಯವರು ಬಹುಕಾಲ ನೆಲಸಿ ಅಲ್ಲಿಯ ಆಗು – ಹೋಗುಗಳನ್ನು ಕೂಲಂಕುಷವಾಗಿ ಓದುಗನ ಮುಂದೆ ಸಂಕಥನ ಮಾದರಿಯಲ್ಲಿ ಅಭಿವ್ಯಕ್ತಿಸುತ್ತಾರೆ. ಅಲ್ಲಿನ ಜನ ಜೀವನ, ಸಂಘ ಸಂಸ್ಥೆಗಳ ಕಾರ್ಯ ವೈಖರಿ, ಭಿನ್ನ ಭಿನ್ನವಾದ ಪ್ರವಾಸ ಕ್ಷೇತ್ರಗಳ ವೈಶಿಷ್ಟತೆ ಬಿಚ್ಚಿಡುವ ಕ್ರಮ ವಿವಿಧ ದೇಶಗಳ ಪರ್ಯಟನೆಗೈದ ಫಲ ಶೃತಿ ಇವರ ಕೃತಿಗಳಲ್ಲಿ ಗೋಚರವಾಗುತ್ತದೆ. ಫ್ರಾನ್ಸ್ ನ ಬಾಸ್ಕ್ ಜನಾಂಗ, ಅಮೇರಿಕಾದ ಆಯುಷ್ ಜನಾಂಗ,ನ್ಯೂಜಿಲ್ಯಾಂಡ್ನ ಮೌರಿ ಜನಾಂಗ ಅವರ ಭೂಮಿ ಪ್ರೀತಿ, ಬಾಸ್ಕ್ ಜನಾಂಗದ ಹಬ್ಬಗಳಾದ ಎಸ್ಕುರಾ ಮತ್ತು ಫೆಲೋಟ್ಗಳ ಬಗೆಗೆ ವಿವರಿಸುವ ಮೂಲಕ ಜಗತ್ತಿನ ಸಂಸ್ಕೃತಿಯನ್ನು ಮುಖಾಮುಖಿಯಾಗಿಸಿರುವುದು ಇವರ ಪ್ರವಾಸ ಕಥನಗಳ ವಿಶೇಷ. ಬಯೋನ್ನ ಅಗಾಧ ಜಲರಾಶಿ, ಐಫೆಲ್ ಟವರ್, ಈಜಿಪ್ಟ್ನ ಫಿರಾಮಿಡ್ಗಳು, ಆಸ್ಟ್ರೇಲಿಯಾದ ನಾಟ್ರೆಡ್ಯಾಂ ಚರ್ಚ್, ಅಮೇರಿಕಾದ ಗ್ರ್ಯಾಂಡ್ ಕ್ಯಾನಿಯನ್ ನ್ಯೂಜಿಲ್ಯಾಂಡ್ನ ಫ್ಯಾಕ್ಸ್ ಗ್ಲೇಸಿಯರ್ ಹೀಗೆ ತಮ್ಮ ಅಲೆಮಾರಿ ತತ್ವಕ್ಕೆ ಒಳಗಾದ ಎಲ್ಲಾ ದೇಶಗಳನ್ನು ಚಾರಿತ್ರಿಕ, ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ ನೆಲೆಗಳ ಒಳನೋಟಗಳನ್ನು ಕಟ್ಟಿಕೊಡುತ್ತಾರೆ

ನಾಗತಿಹಳ್ಳಿ ಅವರ ಪ್ರವಾಸ ಕಥನಗಳು ನಮಗೆ ಬಹಳ ಮುಖ್ಯವೆನಿಸುವುದು ಅವರು ತಮ್ಮ ಕೃತಿಗಳಲ್ಲಿ ಚರ್ಚಾ ಮಾದರಿಯನ್ನು ತಂದು ನೆಲಮೂಲವನ್ನು ಮುಖಾಮುಖಿಯಾಗಿಸುತ್ತಾರೆ. ಆ ಮೂಲಕ ಓದುಗರನ್ನು ಚಿಂತನೆಗೆ ದೂಡುವ ಅವರ ಜಾಗೃತ ವಿವೇಕ ಇವರ ಎಲ್ಲಾ ಪ್ರವಾಸ ಕಥನಗಳಲ್ಲಿ ಕಾಣಸಿಗುತ್ತದೆ. ಆಯಾಯ ಸಂಸ್ಕೃತಿಯಲ್ಲಿ ಮಿಲಿತಗೊಂಡ ಭಿನ್ನ ಭಿನ್ನ ಸ್ವರೂಪಗಳನ್ನು ಸೂಕ್ಷ್ಮವಾಗಿ ಗುರುತಿಸುವ ನಾಗತಿಹಳ್ಳಿಯವರು ವಿವಿಧ ದೇಶಗಳ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಆ ಸ್ಥಳಗಳ ಸವಿವರಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾರೆ. ಜಗತ್ತಿನ ಬಹುಜನರ ಆಕರ್ಷಣೆಗೆ ಪ್ರವಾಸ ಏಕೆ ಕಾರಣ? ಎಂಬ ಪ್ರಶ್ನೆಗೆ ಇವರ ಕೃತಿಗಳಲ್ಲಿ ಉತ್ತರ ಹುಡುಕುವ ಪ್ರಯತ್ನವಿದೆ. ಫ್ರಾನ್ಸ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಅಮೇರಿಕಾ, ನೇಪಾಳ ಮುಂತಾದ ಜಗತ್ತಿನ ವಿವಿಧ ದೇಶಗಳು ಹಾಗೂ ಭಾರತದ ನಡುವಣ ಇರುವ ಕೆಲವು ನಿಲುವುಗಳ ಬಗೆಗೆ ಲೇಖಕರು ಪ್ರಸ್ತಾಪಿಸುತ್ತಾರೆ. ಭಾರತೀಯ ಸಂಸ್ಕೃತಿಯ ಹಿನ್ನಲೆಯಲ್ಲಿ ವಿದೇಶಗಳ ಸಂಸ್ಕೃತಿಯನ್ನು, ಸಮಯ ಪ್ರಜ್ಞೆಯನ್ನು, ದುಡಿತದ ವಿಧಾನವನ್ನು, ಕಾಯಕ ಪ್ರಜ್ಞೆಯನ್ನು ಗ್ರಹಿಸುವ ಲೇಖಕರು ವಿದೇಶಿ ಹಾಗೂ ಸ್ವದೇಶಿ ಜನ ಸಮುದಾಯದ ಬದುಕಿನ ವಿಧಾನವನ್ನು ಮುಖಾಮುಖಿಯಾಗಿಸಿ ಕಡುವಾಸ್ತವಗಳ ಹಿನ್ನಲೆಯಲ್ಲಿ ಚರ್ಚಿಸಿದ್ದಾರೆ. ಒಟ್ಟಾರೆ ವಿದೇಶಿ ಬದುಕು,ಅಲ್ಲಿನ ಸಮಾಜಗಳ ಬಗ್ಗೆ ಉಪಯುಕ್ತ ಮಾಹಿತಿ ಸಂಗ್ರಹಿಸಲು, ಸಂಸ್ಕೃತಿಯ ಚಿತ್ರಣದ ಅರಿಯುವ ಮೂಲಕ ನಮ್ಮ ಸಮಾಜ ಮತ್ತು ಬದುಕನ್ನು ಮರುಕಟ್ಟುವ ಸಾಧ್ಯತೆಗಳ ಸುಳಿವನ್ನು ತಿಳಿಯಲು ಇವರ ಪ್ರವಾಸ ಕಥನ ಮಾದರಿಯಾಗುತ್ತವೆ. ನಾಗತಿಹಳ್ಳಿಯವರು ತಮ್ಮ ಪ್ರವಾಸ ಕಥನಗಳಲ್ಲಿ ಬದುಕಿನ ಘಟನೆಗಳನ್ನು ಮಾತ್ರವಲ್ಲದೆ ವಿದೇಶಗಳ ವಿಭಿನ್ನ ಸಾಂಸ್ಕೃತಿಕ ಚಹರೆಗಳನ್ನು ಅಧಿಕೃತವಾಗಿ ಮಾಹಿತಿ ಸಂಗ್ರಹದೊಂದಿಗೆ ಓದುಗರಿಗೆ ಉಣಬಡಿಸುತ್ತಾರೆ. ಇಲ್ಲಿ ವಾಸ್ತವತೆ, ಆತ್ಮವೃತ್ತಾಂತ, ವಸ್ತುನಿಷ್ಠತೆ, ಸೃಜನಶೀಲತೆ, ಕವಿ ಹೃದಯತೆ ಮುಪ್ಪುರಿಗೊಂಡಿರುತ್ತವೆ. ಭಾಷೆಯ ಅಭಿವ್ಯಕ್ತಿಯಲ್ಲೂ ನಾಗತಿಹಳ್ಳಿ ಚಂದ್ರಶೇಖರ ಅವರು ಜಾಗ್ರತೆಯನ್ನು ವಹಿಸಿಕೊಂಡಿರುವುದು ವೇದ್ಯವಾಗುತ್ತದೆ. " ಅಂಕಿ,ಅಂಶ ದಾಖಲೆಗಳಿಗಿಂತ ಮಿಗಿಲಾಗಿ ಸ್ವಾನುಭವಜನ್ಯ ವ್ಯಕ್ತಿ ವಿಶಿಷ್ಟತೆಯಿಂದ ಕೂಡಿದ ಇವರ ಪ್ರವಾಸ ಕಥನಗಳು ಓದುಗರಿಗೆ ಹೆಚ್ಚು ಹತ್ತಿರವಾಗುತ್ತದೆ.

ಸಮುದಾಯದ ಸಂಸ್ಕೃತಿಗಳನ್ನು ಜೀವನದ ಸ್ಥಿತಿಯನ್ನು ಸಮಯ ಪ್ರಜ್ಞೆಯ ಕಾರ್ಯ ಧಕ್ಷತೆಯನ್ನು ಎಲ್ಲವನ್ನು ಭಾರತ ದೇಶಕ್ಕೆ ಹೋಲಿಸಿ ತೌಲನಿಕವಾಗಿ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ ಅಂದರೆ ಭಾರತ ಮತ್ತು ವಿದೇಶೀ ವ್ಯವಸ್ಥೆಯನ್ನು ವಿಶ್ಲೇಷಿತ್ತಾ ಒಂದು ರೀತಿಯ ಅತಿರೇಕಕ್ಕೆ ಹೋಗಿ ಅನ್ಯದೇಶಗಳನ್ನು ಪ್ರಶಂಸಿಸುತ್ತಾ ಭಾರತವನ್ನು, ಭಾರತದ ಸಂಸ್ಕೃತಿಯನ್ನು ಅಣಕಿಸುತ್ತಾರೆ ಇದು ಇವರ ಪ್ರವಾಸ ಕಥನಕ್ಕಿರುವ ಮಿತಿಯೂ ಹೌದು. ಅಲ್ಲದೆ ಆಯಾಯ ದೇಶದ

ರಾಜಕೀಯ ಧಾರ್ಮಿಕ ಸ್ಥಿತಿ-ಗತಿ.ವಾಣಿಜ್ಯ-ವ್ಯವಹಾರಗಳ ಅಂಶಗಳು ಸುಂದರವಾದ ತಾಣಗಳು, ಸ್ವಚ್ಛಂದವಾದ ಸ್ವತಂತ್ರತೆ ಮೊದಲಾದವುಗಳನ್ನು ಇವರ ಪ್ರವಾಸ ಕಥನಗಳ ಒಡಲಾಳದಲ್ಲಿ ಕಾಣಬಹುದಾಗಿದೆ. ಉತ್ತರ ಭಾರತ ಹಾಗೂ ವಿದೇಶಗಳ ಪ್ರಮುಖ ಸ್ಥಳಗಳ ಕುರಿತಾಗಿ ಬಂದ ಇವರ ಕೃತಿಗಳು ಆಯಾ ತಾಣಗಳ ಸಂಪೂರ್ಣ ಚಿತ್ರಣವನ್ನು ನೀಡುತ್ತವೆ, ಜೊತೆಗೆ ಲೇಖಕರ ಅನುಭವಗಳು ಹಾಗೂ ಆಯಾ ಸ್ಥಳಗಳು ಜನರಲ್ಲಿ ನಡೆಯುವ ಸ್ಥಿತ್ಯಂತರಗಳನ್ನು ಕಾಣಬಹುದಾಗಿದೆ. ನಾಗತಿಹಳ್ಳಿ ಅವರು ವಿವಿಧ ದೇಶಗಳ ಆದಿನಿವಾಸಿಗಳ ಬದುಕನ್ನು ಹಾಗೂ ಅವರು ರೂಢಿಸಿಕೊಂಡ ಸಂಸ್ಕೃತಿಯನ್ನು ನಿಬ್ಬೆರಗಾಗುವಂತೆ ಚಿತ್ರಿಸಿದ್ದಾರೆ.ವೈಜ್ಞಾನಿಕವಾಗಿ ಚರ್ಚಿಸಿರುವ ಇಲ್ಲಿನ ವಿಷಯಗಳು ಕೊನೆಗೆ ಮಾನವೀಯತೆಯ ಅಂತಃಕರಣಪೂರಿತ ದೃಷ್ಟಿಕೋನದಿಂದ ವಿವರಣೆ ಪಡೆದು ಓದುಗರನ್ನು ಮೆಚ್ಚಿಸಲು ಪ್ರಯತ್ನಿಸುತ್ತವೆ.

ತಾವು ಪ್ರವಾಸ ಕೈಕೊಂಡ ರಾಷ್ಟ್ರ/ರಾಜ್ಯಗಳ ಸಿಹಿ ಕಹಿ ಘಟನೆಗಳನ್ನು ಸ್ವಚ್ಛವಾದ ಸಂಸ್ಕೃತಿ ಪರಿಚಯಿಸುತ್ತಲೇ ಭಾರತ ದೇಶದೊಂದಿಗೆ ಹೋಲಿಸಿ ಚರ್ಚಿಸುವ ತೌಲನಿಕ ಅಧ್ಯಯನದ ಮಾದರಿಗಳು ಇವರ ಪ್ರವಾಸ ಕಥನಗಳಲ್ಲಿ ಮೂಡಿಬಂದಿವೆ. ಬೇರೆ ಬೇರೆ ದೇಶಗಳ ಬೇರೆ ಬೇರೆ ಸಂಸ್ಕೃತಿಗಳ ತಿರುಳನ್ನು ಪ್ರವಾಸ ಕಥನಗಳ ಮೂಲಕ ಸಹೃದಯಿಗಳಿಗೆ ಅಭಿವ್ಯಕ್ತಿಸಿದ್ದಾರೆ. ಇದರಿಂದ ನಮ್ಮ ದೇಶದ ಸಂಸ್ಕೃತಿಯೊಂದಿಗೆ ವಿದೇಶದ ಸಂಸ್ಕೃತಿಗಳನ್ನು ಅವುಗಳ ವಸ್ತು ಸ್ಥಿತಿಯ ತೌಲನಿಕ ವಿವೇಚನೆಯನ್ನುಇಂತಹ ಪ್ರವಾಸ ಕಥನಗಳಿಂದ ನಾವು ಕಾಣಬಹುದಾಗಿದೆ. ಬಹುತೇಕ ಕಾಲದ ಮಿತಿಯಿಂದ ಕೈಗೊಂಡ ಪ್ರವಾಸವಾಗಿರುವುದರಿಂದ ಪೂರ್ಣಪ್ರಮಾಣದ ಮಾಹಿತಿ ಕೊಡಲಾಗುವುದಿಲ್ಲವೆಂಬ ಆತಂಕ ಅಥವಾ ಮನೋಭಾವ ಎಲ್ಲ ಪ್ರವಾಸ ಕಥನಕಾರರಲ್ಲೂ ಕಾಣುವ ಅಂಶ. ಇದರಿಂದ ನಾಗತಿಹಳ್ಳಿ ಚಂದ್ರಶೇಖರ ಅವರ ಪ್ರವಾಸ ಕಥನಗಳು ಹೊರತಾದಂತೆ ಕಾಣುವುದಿಲ್ಲ. ಗಡಿಗಳಲ್ಲಿನ ವಿಚಿತ್ರವಾದ ವಾತಾವರಣಗಳಲ್ಲೂ ಸಂತಸ ಉತ್ಸಾಹ ವ್ಯಕ್ತಪಡಿಸುವ ನಾಗತಿಹಳ್ಳಿಯವರು ನನ್ನಗೃಹಿಕೆಯ ನೇಪಾಳ ಮತ್ತು ನನ್ನ ಗೃಹಿಕೆಯ ಸಿಕ್ಕಿಂ ಕೃತಿಗಳ ಮೂಲಕ ಸಂಪೂರ್ಣವಾಗಿ ಹಿಮಾಲಯಕ್ಕೆ ಸಹೃದಯ ಓದುಗರನ್ನು ಕರೆದೊಯ್ಯುತ್ತಾರೆ. ಅಲ್ಲಿನ ಪರಿಸರ ಮತ್ತು ಸಾಮಾಜಿಕ ಸ್ಥಿತ್ಯಂತರಗಳನ್ನು ತುಂಬು ಹೃದಯದಿಂದ ವಿವರಿಸುತ್ತಾರೆ. ನೇಪಾಳದ ಒಂದು ಭಾಗದ ಜನ ಜೀವನದ ಸಚಿತ್ರ ನೀಡುವಲ್ಲಿ ನಾಗತಿಹಳ್ಳಿಯವರು ಸಮರ್ಥರೆನ್ನಿಸಿಕೊಂಡಿದ್ದಾರೆ. ದಾರಿಯುದ್ದಕ್ಕೂ ಸಿಗುವ ಪ್ರವಾಸಿಗಳು, ಅವರ ಜೊತೆಗಿನ ಸ್ನೇಹ ಭಾವವನ್ನು ವ್ಯಕ್ತಪಡಿಸುತ್ತ ನೇಪಾಳವು ಪ್ರವಾಸಿಗಳ ಆಕರ್ಷಣೆಯನ್ನು ಸೆಳೆಯುತ್ತಿದೆ ನಿಜ, ಆದರೆ ತನ್ನ ಮೂಲ ಸಂಸ್ಕೃತಿಯಿಂದ ಕಳಚಿಕೊಳ್ಳುವ ಅಂಶಗಳನ್ನು ಇವರು ಇಲ್ಲಿ ಎತ್ತಿ ತೋರಿಸುತ್ತಾರೆ. ಪ್ರಕೃತಿಯ ರಮಣೀಯತೆಯ ಸೂಕ್ತ ಅನುಭವಗಳ ಸಾಕಾರ ಗೊಳಿಸುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ವಿಧಾನ ಶ್ಲಾಘನೀಯವಾದದ್ದು. ಆದರೂ ಅವರು ವ್ಯಕ್ತಪಡಿಸುವ ಸಮಸ್ಯೆ ಮತ್ತು ಆತಂಕಗಳು ಓದುಗರನ್ನು ಕುತೂಹಲಗೊಳಿಸುತ್ತವೆ. ನನ್ನ ರಕ್ತದೊಂದಿಗೆ ಬೆರೆತು ಹೋದ ಆ ನಿರ್ದಿಷ್ಟ ಕಾಲ ಪ್ರವಾಹವನ್ನು ಅಲ್ಲಿನ ಘಟನೆಗಳನ್ನು ಅನುಮಾನಗಳನ್ನು ವ್ಯಕ್ತಪಡಿಸಲು ಯಾವ ಮಾಧ್ಯಮವನ್ನು ಆರಿಸಲಿ? ಹಿನ್ನೆಲೆಗೆ ‘ ಅದ್ಭುತ’ ಆ ವಾಕ್‌ಗಳ ಹೇಳ ತೀರದ ಋಷಿ ನಡೆತದ ತೀವ್ರ ಆಯಾಸ ಮತ್ತು ಕಾಡಿದ ಹಸಿವೆಗಳನ್ನಷ್ಟೇ ಶಾಯಿ ಭಾವದಲ್ಲಿ ಇರಿಸಿಕೊಂಡು ಕ್ಷಣ ಕ್ಷಣಗಳ ದೈಹಿಕ ಮತ್ತು ಮಾನಸಿಕ ಸ್ಥಿತಿಗಳನ್ನು ಪ್ರತಿಬಿಂಬಿಸುವಂತೆ ಬಲ್ಲ ಶಬ್ದಗಳಲ್ಲಿ ಗೀಚುವ ಪ್ರಯತ್ನ ಮಾಡಬೇಕೆ? ಒಂದು ಬರಹದ ಆಯ್ಕೆಗೆ ಎಲ್ಲವೂ ಮುಖ್ಯವಲ್ಲವೇ? ಎಂಬ ಲೇಖಕರು ತಮ್ಮ ಈ ಪ್ರವಾಸ ಕಥನದಲ್ಲಿ ಇರಿಸಿಕೊಂಡ ಅಂಶಗಳನ್ನು ಕಾಣಬಹುದಾಗಿದೆ.

ನಾಗತಿಹಳ್ಳಿ ಅವರು ಕನ್ನಡ ಪ್ರವಾಸ ಸಾಹಿತ್ಯವನ್ನು ಮೌಲ್ಯಯುತವಾಗಿ ಗಟ್ಟಿಗೊಳಿಸುವ ಬರಹ ಮಾಡಿದ್ದಾರೆ. ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿತ್ವದ ಜೀವನ ಪ್ರೀತಿಯಿಂದ ಮಾನವೀಯ ಮೌಲ್ಯ ಕುರಿತು ಚಿಂತಿಸುವ ನಾಗತಿಹಳ್ಳಿ ಪ್ರವಾಸದ ಅನುಭವಗಳನ್ನು ಕಥನ ರೂಪದಲ್ಲಿ ಕಟ್ಟಿಕೊಡುವಾಗ ಹಾಸ್ಯದ ಲೇಪನವನ್ನು ಹಚ್ಚಿದ್ದಾರೆ. ಸಂದರ್ಭಾನುಸಾರ ವಿಮರ್ಶಕರಾಗಿ ,ತತ್ವಶಾಸ್ತ್ರಜ್ಞರಾಗಿ, ಮನಃಶಾಸ್ತ್ರಜ್ಞರಾಗಿ, ಸಂಶೋಧನಾ ಮನಃಪ್ರವೃತ್ತಿಯವರಾಗಿ,ಇತಿಹಾಸಕಾರರಾಗಿ ತಮ್ಮ ಅನುಭವಗಳನ್ನು ನಿರುಪಿಸುತ್ತಾರೆ. ತಮ್ಮ ಅಮೇರಿಕಾದ ಪ್ರವಾಸದ ಸಂದರ್ಭದಲ್ಲಿ ಅಮೇರಿಕಾದಂತ ಮುಂಚೂಣಿ ದೇಶದ ವೈಭವವನ್ನು ನಿರೂಪಿಸುತ್ತಲೇ ಆ ದೇಶವಾಸಿಗಳ ದೌರ್ಬಲ್ಯಗಳನ್ನು ನಿಕಷಕ್ಕೆ ಒಡ್ಡುತ್ತಾರೆ. ಆಧುನಿಕತೆಯ ಶಿಖರದಲ್ಲಿರುವ ಅಮೇರಿಕಾದಲ್ಲೂ ನಾಗರಿಕತೆಯ ಸ್ಪರ್ಶವಿಲ್ಲದೆ ಬದುಕುತ್ತಿರುವ ಆಯುಷ್ ಜನಾಂಗದ ಬದುಕಿನ ಕ್ರಮವನ್ನು ಕಟ್ಟಿಕೊಡುತ್ತಾರೆ. ಇಂತಹ ವಿಷಯಗಳೇ ನಾಗತಿಹಳ್ಳಿಯವರನ್ನು ಭಿನ್ನವಾಗಿಸುತ್ತವೆ. ಇವರ ಪ್ರವಾಸ ಕಥನಗಳಲ್ಲಿ ಸೌಂದರ್ಯ,ಸೊಬಗು,ಅದ್ಭುತ ಹಾಗೂ ಆಕರ್ಷಣೀಯ ಸ್ಥಳಗಳ ವಿವರಣೆ ಇದೆ. ಅವುಗಳನ್ನು ಸಾಂಸ್ಕೃತಿಕ ಚಿಂತನೆಯ ಮೂಸೆಯಲ್ಲಿ ಕಟ್ಟಿಕೊಡುತ್ತಾರೆ. ನೆಲಮೂಲ ಚಿಂತನೆಗಳು ಇವರ ಪ್ರವಾಸ ಕಥನಗಳಲ್ಲಿ ಗೋಚರವಾಗುತ್ತವೆ.

ಇತ್ತೀಚಿನ ದಿನಗಳಲ್ಲಿಪ್ರವಾಸ ಸಾಹಿತ್ಯವು ಸಾಮಾಜಿಕ ಅಧ್ಯಯನದಿಂದ ಒಂದು ಸಾಂಸ್ಕೃತಿಕ ಅಧ್ಯಯನವಾಗಿ ವಿಸ್ತರಿಸುವುದು ಕಾಣಬಹುದಾಗಿದೆ. ಸಾಹಿತಿಯಲ್ಲಿ ಇರಬೇಕಾದ ಎಲ್ಲಾ ವಿಶೇಷ ಗುಣಗಳಿರುವಂತೆ ಪ್ರವಾಸ ಕಥನಗಾರನಿಗೂ ಇರಬೇಕಾಗುತ್ತದೆ. ಇದಕ್ಕಿಂತ ಒಂದು ಹೆಜ್ಜೆ ಮುಂದೆ ಪ್ರವಾಸ

ಕಥನಗಾರನಿಗೆ ಇರಬೇಕಾಗುತ್ತದೆ. ಏಕೆಂದರೆ " ಕೋಶ ಓದಬೇಕು ಇಲ್ಲವೆ ದೇಶ ನೋಡಬೇಕು" ಎನ್ನುವಂತೆ ಕೋಶ ಓದಿ ಅರಗಿಸಿ ಕೊಳ್ಳುವಂತೆ ನೋಡಿದ ದೇಶವನ್ನು ಸಹೃದಯನಿಗೆ ಹೃದಯ ಸ್ಪರ್ಶಿಯಾಗುವಂತೆ ತಿಳಿಸಬೇಕಾದರೆ ಸಾಹಿತಿಗಿಂತ ಪ್ರತಿಭಾ ಸಂಪನ್ನನಾಗಿರಬೆಕು. ಡಾ.ಕೆ.ಅನಂತರಾಮು ರವರು ಒಬ್ಬ ಪ್ರವಾಸ ಕಥನಕಾರರಿಗೆ ಇರಬೇಕಾದ ಗುಣಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. " ಪ್ರವಾಸ ಕಥನಕಾರನು ಪ್ರತಿಭೆ, ಪಾಂಡಿತ್ಯ, ಉತ್ಪತ್ತಿ ಮತಿತ್ವಗಳ ತ್ರಿವೇಣಿ ಸಂಗಮನಾಗಿರಬೇಕು. ಲೋಕದ ಎಲ್ಲ ಸದ್ವದ್ವಿಚಾರವು ನನಗೆ ಬೇಕು, ಎಲ್ಲ ಜ್ಞಾನವು ನನಗೆ ಬೇಕು ಎಂಬ ಸರ್ವ ಕುತೂಹಲ ಅವನಾಗಿರಬೇಕು. ಸ್ನೇಹ ಶೀಲವೂ, ಆಸ್ತಿಕವೂ, ಉದಾರವೂ, ನಿರಾಡಂಬರವೂ, ಪ್ರಾಮಾಣಿಕವೂ, ಗರ್ವರಹಿತವೂ ಮಂದಹಾಸಾಯುಕ್ತವೂ, ಆದ ವ್ಯಕ್ತಿತ್ವ ಅವನದಾಗಿರಿಬೇಕು" ಇಂತಹ ಪ್ರವಾಸ ಕಥನಕಾರನಿಂದ ಉತ್ತಮ ಕೃತಿ ಬರಬಹುದೆಂದು ಅವರು ಅಭಿಪ್ರಾಯ ಪಡುತ್ತಾರೆ. ಈ ಮಾತಿಗೆ ಸರಿಹೊಂದುವಂತೆ ಕೆಲವು ಮಿತಿಗಳ ನಡುವೆ ಎಲ್ಲಾ ನೆಲೆಯಿಂದಲೂ ನಾಗತಿಹಳ್ಳಿ ಚಂದ್ರಶೇಖರ ಅವರ ಪ್ರವಾಸ ಸಾಹಿತ್ಯ ಗೆಲುವು ಪಡೆದುಕೊಂಡಿದೆ.

**ಪರಾಮರ್ಶನ ಕೃತಿಗಳು**

1. ಅಲೆಮಾರಿ ನಾಗತಿಹಳ್ಳಿ ಚಿನ್ನೇನಹಳ್ಳಿ ಸ್ವಾಮಿ, ಅಹರ್ನಿಶಿ ಪ್ರಕಾಶನ,ಬೆಂಗಳೂರು
2. ದಶಕ ದ ಕನ್ನಡಸಾಹಿತ್ಯ ಡಾ.ಬಿ.ಎಂ.ಪುಟ್ಟಯ್ಯ ಪ್ರಸಾರಾಂಗ, ಕನ್ನಡ ವಿ,ವಿ ಹಂಪಿ
3. ಅಯನ ನಾಗತಿಹಳ್ಳಿ ಚಂದ್ರಶೇಖರ, ಅಭಿವ್ಯಕ್ತಿ ಪ್ರಕಾಶನ,ಬೆಂಗಳೂರು
4. ನನ್ನ ಗ್ರಹಿಕೆಯ ಈಜಿಪ್ಟ್ ನಾಗತಿಹಳ್ಳಿ ಚಂದ್ರಶೇಖರ, ಅಭಿವ್ಯಕ್ತಿ ಪ್ರಕಾಶನ,ಬೆಂಗಳೂರು
5. ನನ್ನ ಗ್ರಹಿಕೆಯ ನೇಪಾಳ ನಾಗತಿಹಳ್ಳಿ ಚಂದ್ರಶೇಖರ, ಅಭಿವ್ಯಕ್ತಿ ಪ್ರಕಾಶನ,ಬೆಂಗಳೂರು
6. ನನ್ನ ಗ್ರಹಿಕೆಯ ಅಮೇರಿಕಾ ನಾಗತಿಹಳ್ಳಿ ಚಂದ್ರಶೇಖರ, ಅಭಿವ್ಯಕ್ತಿ ಪ್ರಕಾಶನ,ಬೆಂಗಳೂರು
7. ಹೊಳೆದಂಡೆ ನಾಗತಿಹಳ್ಳಿ ಚಂದ್ರಶೇಖರ, ಅಭಿವ್ಯಕ್ತಿ ಪ್ರಕಾಶನ,ಬೆಂಗಳೂರು (ಆಸ್ಟ್ರೇಲಿಯ-ನ್ಯೂಜಿಲ್ಯಾಂಡ್ ಪ್ರವಾಸ ಕಥನ )
8. ನನ್ನ ಗ್ರಹಿಕೆಯ ಸಿಕ್ಕಿಂ